## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಶೀಲ್ ಜಿ ನಮೋಶಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರಿಸುವ ಬಗ್ಗೆ

**ವಿಷಯ:**

ದಿನಾಂಕ:20.07.2024 ರಂದು ಅಪರ ಆಯುಕ್ತಾಲಯ ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ದಲ್ಲಿ ಆರ್.ಎಂ.ಎಸ್.ಎ ಪ್ರೌಢಶಾಲೆ ಸಿಬ್ಬಂದಿಗಳು ಕಳೆದ 4–5 ತಿಂಗಳುಗಳಿಂದ ಸರಿಯಾದ ವೇತನ ಪಾವತಿ ಆಗದೆ ಇರುವುದರಿಂದ ಪ್ರತಿಭಟನೆ ನಡೆಸಿರುತ್ತಾರೆ. ಕಳೆದ 2 ವರ್ಷಗಳಿಂದ ಹೊಸದಾಗಿ ರಚನೆಯಾದ ತಾಲ್ಲೂಕುಗಳ ಆರ್.ಎಂ.ಎಸ್.ಎ ಪ್ರೌಢಶಾಲೆ ಸಿಬ್ಬಂದಿಗಳ ವೇತನವು 4–5 ತಿಂಗಳಿಂದ ಕೂಡ ಪಾವತಿ ಆಗಿರುವುದಿಲ್ಲ. ಇದರಿಂದ ಶಿಕ್ಷಕರು ಸರಿಯಾದ ಸಮಯಕ್ಕೆ ವೇತನ ಪಾವತಿ ಆಗದೆ ಇರುವುದರಿಂದ ತುಂಬಾ ತೊಂದರೆಗೆ ಹಾಗೂ ಜೀವನ ನಿರ್ವಹಣೆ ಮಾಡಲು ಕಷ್ಟಕರವಾಗುತ್ತಿದೆ. ಈ ಕುರಿತು ಹಲವು ಬಾರಿ ಆರ್.ಎಂ.ಎಸ್.ಎ ಕಛೇರಿಗೆ ಭೇಟಿ ನೀಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ತಂದರು ಗಂಭೀರವಾಗಿ ಪರಿಗಣಿಸದೆ ಇರುವುದರಿಂದ, ಸರಿಯಾದ ಪರಿಹಾರ ಒದಗಿಸುವಲ್ಲಿ ತೊಂದರೆಯಾಗಿರುತ್ತದೆ. ಈ ಸಮಸ್ಯೆ ಕಲಬುರ್ಗಿ ಜಿಲ್ಲೆಗೆ ಮಾತ್ರವಲ್ಲದೆ ರಾಜ್ಯಾದ್ಯಂತ ಹೊಸ ತಾಲ್ಲೂಕುಗಳ ರಚನೆಯಾದ ಆರ್.ಎಂ.ಎಸ್.ಎ ಶಾಲೆಗಳಿಗೆ ಸಂಬಂಧಿಸಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳ ವೇತನ ಬೇಡಿಕೆ ಸಲ್ಲಿಸುವಾಗ ಹೊಸದಾಗಿ ರಚನೆಯಾದ ತಾಲ್ಲೂಕುಗಳ ಆರ್.ಎಂ.ಎಸ್.ಎ ಶಾಲೆಗಳ ವೇತನ ಅನುದಾನ ಬೇಡಿಕೆಯನ್ನು ಪ್ರತ್ಯೇಕವಾಗಿ ನೀಡುವಂತೆ ಮನವಿ ಸಲ್ಲಿಸದೆ ಇರುವುದರಿಂದ, ಈ ಸಮಸ್ಯೆ ಪ್ರತಿ ತಿಂಗಳು ಉದ್ಭವಿಸುತ್ತಿದೆ. ಆದ್ದರಿಂದ ಹೊಸದಾಗಿ ರಚನೆಯಾದ ತಾಲ್ಲೂಕುಗಳ ಪ್ರೌಢ ಶಾಲೆಗಳ ಸಿಬ್ಬಂದಿಗಳಿಗೆ ಸರಿಯಾದ ಸಮಯಕ್ಕೆ ಪ್ರತಿ ತಿಂಗಳು ಸರಿಯಾಗಿ ವೇತನ ಆಗುವಂತೆ ನೋಡಿಕೊಂಡು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿ ಕೂಡಲೇ ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಈ ಮೂಲಕ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖಾ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಉತ್ತರ:**

ಹೊಸ ತಾಲ್ಲೂಕುಗಳು ಆರ್ಥಿಕ ವರ್ಷದ ಮಧ್ಯಭಾಗದಲ್ಲಿ ರಚನೆಗೊಂಡ ಕಾರಣ ಸಂಬಂಧಿಸಿದ ಆರ್.ಎಂ.ಎಸ್.ಎ ಶಾಲೆಗಳ ಡಿ.ಡಿ.ಓ ಕೋಡ್‌ಗಳನ್ನು ಸೃಜನೆ ಮಾಡಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಕಳೆದ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ಹಿಂದಿನ ತಾಲ್ಲೂಕುಗಳ ಡಿ.ಡಿ.ಓ ಕೋಡ್‌ಗಳಿಂದಲೇ ವೇತನ ಅನುದಾನವನ್ನು

ಸೆಳೆಯಲು ಆರ್ಥಿಕ ಇಲಾಖೆಯು ವಿಶೇಷ ಅನುಮತಿಯನ್ನು ನೀಡಿದ್ದರಿಂದ ಆರ್.ಎಂ.ಎಸ್.ಎ ಶಾಲೆಗಳ ವೇತನ ಅನುದಾನವನ್ನು ಸೆಳೆಯಲಾಗಿತ್ತು.

2024–25ನೇ ಸಾಲಿಗೆ ರಾಜ್ಯದ ಎಲ್ಲಾ ಹೊಸ ತಾಲ್ಲೂಕುಗಳ ಆರ್.ಎಂ.ಎಸ್.ಎ ಶಾಲೆಗಳ ಡಿ.ಡಿ.ಓ ಕೋಡ್‌ಗಳ ಸೃಜನೆಯಾಗಿ ಖಜಾನೆ–2 ತಂತ್ರಾಂಶದಲ್ಲಿ ಮ್ಯಾಪ್ ಮಾಡಿಸಿ ವೇತನವನ್ನು ಸೆಳೆಯಲಾಗುತ್ತಿದೆ. ಆದರೆ, ಬಿಜಾಪುರ ಜಿಲ್ಲೆಯ 3 ತಾಲ್ಲೂಕುಗಳು, ಕಲಬುರ್ಗಿ ಜಿಲ್ಲೆಯ 2 ತಾಲ್ಲೂಕುಗಳು ಹಾಗೂ ಬಾಗಲಕೋಟೆ ಜಿಲ್ಲೆಯ 1 ತಾಲ್ಲೂಕು ಒಳಗೊಂಡಂತೆ ಒಟ್ಟಾರೆಯಾಗಿ 6 ತಾಲ್ಲೂಕುಗಳ ಡಿ.ಡಿ.ಓ ಕೋಡ್‌ಗಳು ಖಜಾನೆ–2 ತಂತ್ರಾಂಶದಲ್ಲಿ ಮ್ಯಾಪ್ ಮಾಡಿಸದ ಹಿನ್ನೆಲೆಯಲ್ಲಿ, ಸದರಿ 6 ತಾಲ್ಲೂಕುಗಳಲ್ಲಿ ಸಕಾಲದಲ್ಲಿ ವೇತನವನ್ನು ಸೆಳೆಯಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ 6 ತಾಲ್ಲೂಕುಗಳ ಆರ್.ಎಂ.ಎಸ್.ಎ ಶಾಲೆಗಳ ಡಿ.ಡಿ.ಓ ಮ್ಯಾಪಿಂಗ್ ಕಾರ್ಯ ಪ್ರಗತಿಯಲ್ಲಿದ್ದು, ಸದ್ಯದಲ್ಲಿಯೇ ವೇತನವನ್ನು ಸೆಳೆಯಲು ಅನುವು ಮಾಡಿಕೊಡಲಾಗುವುದು.

**ಸಂಖ್ಯೆ: ಇಪಿ 113 ಯೋಯೋಕ 2024**

(ಎಸ್. ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು